ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 19–08–2017

ಪ್ರಕಟಣೆಯ ಕೃಪೆಗಾಗಿ

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಅಣುಕು ಸಂಸತ್

### ಕಾಲೇಜುಗಳಲ್ಲಿ, ಸ್ಪೀಕರ್ಸ್‌ಕ್ಲಬ್ ಇದ್ದಲ್ಲಿ ವಿದ್ಯಾರ್ಥಿಗಳಲ್ಲಿ ಸಂವಹನ ಕಲೆ ಬೆಳೆಸಬಹುದು – ಶ್ರೀಮತಿ ಕೆ ವಿ ರೂಪಾ ಮಹೇಶ್

ಕೊಳ್ಳೇಗಾಲ 19–08–2017 : ಇಂದಿನ ವಿದ್ಯಾರ್ಥಿಗಳಲ್ಲಿ ವೃತ್ತಿ ಪರ ಗುಣಗಳ ಕೊರತೆ ಉಂಟಾಗಿರುವುದಕ್ಕೆ ಕಾಲೇಜುಗಳಲ್ಲಿ ಭವಿಷ್ಯಕ್ಕೆ ನೆರವಾಗುವಂತಹ ಗುಣಗಳನ್ನು ಹೊಂದಲು ಅವಕಾಶಗಳೇ ಇಲ್ಲದಿರುವುದು ಎಂದು ಶ್ರೀಮತಿ ಕೆ ವಿ ರೂಪಾ ಮಹೇಶ್, ಚಾರ್ಟರ್ಡ್ ಅಕೌಂಟೆಂಟ್, ಕೆನಡ ಹಾಗೂ ಕಾಲೇಜಿನ ಹಿರಿಯ ವಿದ್ಯಾರ್ಥಿನಿರವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ ಯುಜಿಸಿ ಪ್ರಾಯೋಜಿತ ''ಅಣುಕು ಸಂಸತ್'' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಓದಿನಷ್ಟೇ ಮಹತ್ವವನ್ನು ವೃತ್ತಪರ ಗುಣಗಳಿಗೂ ನೀಡಬೇಕು. ಅಂಕಗಳಿಗಿಂತ ವೃತ್ತಿಪರ ಗುಣಗಳು ಉಜ್ವಲ ಭವಿಷ್ಯವನ್ನು ರೂಪಿಸಲು ಸಹಾಯಕಾರಿಯಾಗುತ್ತವೆ. ಕಾಲೇಜುಗಳು, ಫೆಸ್ಟ್, ವಿವಿಧ ಸ್ಪರ್ಧೆಗಳು, ವಿಚಾರ ಸಂಕಿರಣಗಳು, ವ್ಯಕ್ತಿತ್ವ ವಿಕಸನ ಶಿಬಿರಗಳು, ವಸ್ತು ಪ್ರದರ್ಶನಗಳು, ಮುಂತಾದ ಪ್ರಾಯೋಗಿಕ ತರಗತಿಗಳನ್ನು ಆಯೋಜಿಸುವುದರಿಂದ ವಿದ್ಯಾರ್ಥಿಗಳಲ್ಲಿ ವೃತ್ತಿಪರ ಕೌಶಲ್ಯ ಹೆಚ್ಚಿಸಬಹುದಾಗಿದೆ. ಇಂದಿನ ''ಅಣುಕು ಸಂಸತ್'' ನಂತಹ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳಲ್ಲಿ ಸಂವಹನ ಕೌಶಲ್ಯ, ನಾಯಕತ್ವ ಗುಣ ಟೀಮ್‌ವರ್ಕ್, ಆತ್ಮವಿಶ್ವಾಸ, ಸೃಜನ ಶೀಲತೆ, ಸಮಯ ಪರಿಪಾಲನೆಯಂತಹ ಗುಣಗಳನ್ನು ತುಂಬಬಹುದಾಗಿದೆ. ಇಂತಹ ಕಾರ್ಯಕ್ರಮ ಆಯೋಜಿಸಿರುವುದು ನಿಜಕ್ಕೂ ಪ್ರಶಂಸನೀಯ, ನಾನು ಕೂಡ ಈ ಕಾಲೇಜಿನ ಹಿರಿಯ ವಿದ್ಯಾರ್ಥಿ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಎಂದರೆ ಶಿಸ್ತುಬದ್ದ ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿ ಬಗ್ಗೆ ಕಾಳಜಿವುಳ್ಳದು ಎಂದರೆ ಅತಿಶಯೋಕ್ತಿಯಲ್ಲ ಎಂದು ತಿಳಿಸಿದರು.




JSS MAHAVIDYAPEETA
JSS COLLEGE FOR WOMEN
KOLLEGAL – 571 440, CHAMARAJANAGAR DIST
MOCK PARLIAMENT
(UGC Sponsored)
HUMAN RIGHT EDUCATION
Department of Political Science
Venue: Auditorium
ಕೊಳ್ಳೇಗಾಲ.




JSS COLLEGE FOR WOMEN
MOCK PARLIAMENT